**ಓ.ಎಸ್.ನಂಬ್ರ: 323/2023** **ಪಿ.ಡಬ್ಲ್ಯೂ :1**

ದಿನಾಂಕ: 19-06-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಮುಂದುವರಿದ ಪಾಟಿ ಸವಾಲು: ಶ್ರೀ ಎಮ್.ಜೆ.ಎಸ್. ವಕೀಲರಿಂದ**

ನಾನು 9ನೇ ತರಗತಿ ಪಾಸಾಗಿರುತ್ತೇನೆ. ನಾನು ಬಸ್ ಕಂಪನಿಯಲ್ಲಿ ಚೆಕಿಂಗ್ ಇನ್ಸಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೆ. ದಿ: 01-03-1974 ರಂದು ದಾವಾ ಆಸ್ತಿ ಕೃಷಿ ಜಮೀನಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಯೋಗೀಶ ಹೊಳ್ಳರು ಆ ಆಸ್ತಿಯ ಮಾಲೀಕರಾಗಿದ್ದರು. ದಿ: 01-03-1974 ರಂದು ದಾವಾ ಆಸ್ತಿ ನನ್ನ ಸ್ವಾಧೀನದಲ್ಲಿತ್ತು. ನನಗೆ ಆ ಆಸ್ತಿಯ ಮೇಲೆ ಮೂಲಗೇಣಿ ಹಕ್ಕು ಇತ್ತು. ದಿ: 01-03-1974 ರಂದು ನಾನು ದಾವಾ ಆಸ್ತಿಯ ಮೂಲಗೇಣಿದಾರನಾಗಿದ್ದೆ ಎಂದು ನನ್ನ ವಕೀಲರಿಗೆ ದಾವೆ ದಾಖಲಿಸುವಾಗ ಮಾಹಿತಿಯನ್ನು ನೀಡಿರುತ್ತೇನೆ. ದಾವಾ ಆಸ್ತಿಗೆ ನನಗೆ ಮತ್ತು ಯೋಗೀಶ ಹೊಳ್ಳರಿಗೆ ಹೊರತುಪಡಿಸಿ ಬೇರೆ ಯಾರಿಗೂ ಸಂಬಂಧ ಇರಲಿಲ್ಲ.

2.1974ನೇ ಇಸವಿಯಲ್ಲಿ ಅಧಿಬೋಗದ ಹಕ್ಕನ್ನು ಕೋರಿ ದಾವಾ ಆಸ್ತಿಗೆ ಡಿಕ್ಲರೇಶನ್ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು ಫಾರ್ಮ ನಂಬ್ರ.7 ಅರ್ಜಿಯನ್ನು ಸಲ್ಲಿಸಿರುತ್ತೇನೆ. ಕುಂದಾಪುರದ ಭೂ ನ್ಯಾಯ ಮಂಡಳಿಯವರು ತನಿಖೆ ಮಾಡಿರುತ್ತಾರೆ. 1974 ನೇ ಇಸವಿಯಲ್ಲಿ ಸಲ್ಲಿಸಿರುವ ಅರ್ಜಿ ಯಾಕೆ ವಜಾ ಆಗಿದೆ ಎಂದು ಗೊತ್ತಿರುವುದಿಲ್ಲ. ಅರ್ಜಿ ವಜಾ ಆಗಿರುವ ಆದೇಶದ ವಿರುದ್ದ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ನಾನು ಸಹಾಯಕ ಕಮೀಷನರ್ ರವರ ಮುಂದೆ ನಿಪಿ 4 ರಂತೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಮೊದಲು ಅರ್ಜಿ ವಜಾಗೊಂಡಿರುವ ವಿಚಾರವನ್ನು ನಿಪಿ 4 ರಂತೆ ಅರ್ಜಿ ಸಲ್ಲಿಸುವಾಗ ಮತ್ತು ನಿಪಿ 5 ರಂತೆ ಆದೇಶವಾಗುವಾಗ ಹೇಳಿರುವುದಿಲ್ಲ.

3. ನಾನು ಮೂಲಗೇಣಿ ಹಕ್ಕನ್ನು ಶಿವುಮನೆ ರಾಮ ರವರಿಂದ ಪಡೆದುಕೊಂಡಿರುತ್ತೇನೆ. 1974 ನೇ ಇಸವಿಗಿಂತ ಎರಡು ವರ್ಷ ಮೊದಲು ಮೂಲಗೇಣಿ ಹಕ್ಕನ್ನು ಶಿವುಮನೆ ರಾಮನಿಂದ ಪಡೆದುಕೊಂಡಿದ್ದೇನೆ. ದಿ: 01-03-1974 ಮತ್ತು ಅದರ ನಿಕಟ ಪೂರ್ವದಲ್ಲಿ ಶಿವುಮನೆ ರಾಮ, ಸುಬ್ರಾಯ ಹಾಗು ನಿಪಿ 3 ರನ್ನು ಬರೆದುಕೊಟ್ಟಿರುವ ಇತರರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿ. ನಿಪಿ 3 ದಾಖಲೆಯನ್ನು ಬರೆದುಕೊಟ್ಟಿರುವವರು ಯೋಗೀಶ ಹೊಳ್ಳ ಅಥವಾ ಅವರ ಕುಟುಂಬದವರಿಂದ ಮೂಲಗೇಣಿಯನ್ನು ಪಡೆದುಕೊಂಡಿರುವುದಿಲ್ಲ. ನಿಪಿ 3 ರಲ್ಲಿ ಶಿವುಮನೆ ರಾಮ ಹಾಗು ಇತರರಿಗೆ ಆ ಆಸ್ತಿಯಲ್ಲಿ ಹಕ್ಕು ಹೇಗೆ ಬಂದಿದೆ ಎಂದು ಕಂಡುಬರುವುದಿಲ್ಲ ಎಂದರೆ ಸರಿ. ನಿಪಿ 3 ದಾಖಲೆಯನ್ನು ಬರೆದುಕೊಟ್ಟಿರುವವರು ನನ್ನ

ಜಾತಿಯವರು ಮತ್ತು ಆತ್ಮೀಯರು ಎಂದರೆ ಸರಿ. ದಿಃ01-03-1974 ರಂದು ದಾವಾ ಆಸ್ತಿಯು ಸರಕಾರದಲ್ಲಿ ನಿಮಿತವಾಗಿತ್ತು ಎಂದರೆ ಸರಿ. ದಿಃ 11-08-1976 ರಂದು ಶಿವುಮನೆ ರಾಮ ಹಾಗು ಇತರರು ಯಾವುದೇ ಗೇಣಿ ಹಕ್ಕನ್ನು ಹೊಂದಿದ್ದರೂ ಸಹ ನಿಪಿ 3 ದಾಖಲೆಯನ್ನು ಬರೆದುಕೊಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿ. ನಿಪಿ 3 ದಾಖಲೆಯನ್ನು ಬರೆದುಕೊಡಲು ಯಾವುದೇ ಹಕ್ಕು ಇರುವುದಿಲ್ಲ ಹಾಗು ನನಗೆ ಆ ದಾಖಲೆಯ ಮೂಲಕ ಯಾವುದೇ ಹಕ್ಕು ಪ್ರಾಪ್ತವಾಗಿರುವುದಿಲ್ಲ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ. ದಿಃ 01-03-1974 ರಂದು ದಾವಾ ಆಸ್ತಿ ನನ್ನ ಸ್ವಾಧೀನದಲ್ಲಿತ್ತು ಎಂದು ತೋರಿಸಲು ದಾಖಲೆಗಳು ಇದೆ. 1974 ನೇ ಇಸವಿಯಲ್ಲಿ ಘೋಷಣಾ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಹಾಗು ನನ್ನ ಹೆಸರಿಗೆ ಯಾವುದೇ ತೀರ್ಪಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 4 ಮತ್ತು 5 ರಂತೆ ಆದೇಶವಾಗುವಾಗ ಮೂಲಗೇಣಿ ದಸ್ತಾವೇಜು ಇದೆ ಎಂದು ಪ್ರಸ್ತಾಪ ಮಾಡಿರುವುದಿಲ್ಲ ಮತ್ತು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ಮೋಸದ ದಾಖಲೆಯಾದ ಕಾರಣ ಅದನ್ನು ಸಹಾಯಕ ಕಮೀಷನರ್ ರವರ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನಾಗಲೀ, ಶಿವುಮನೆ ರಾಮರಾಗಲೀ ಎಂದೂ ಕೂಡಾ ಯೋಗೀಶ ಹೊಳ್ಳರವರ ಒಕ್ಕಲಾಗಿ ಇರಲಿಲ್ಲ ಎಂದರೆ ಸರಿಯಲ್ಲ.

4. ನಿಪಿ 3 ರಲ್ಲಿ ಹೇಳಿರುವ ಭಾಗೀರಥಿ ನನ್ನ ಅಣ್ಣನ ಹೆಂಡತಿ. ನಾನೂ ಮತ್ತು ಭಾಗೀರಥಿ ಒಟ್ಟಿಗೆ ಖರೀದಿ ಮಾಡಿರುತ್ತೇವೆ ಎಂದು ನಿಪಿ 3 ರಲ್ಲಿ ಕಂಡುಬರುತ್ತದೆ ಎಂದರೆ ಸರಿ. ನಾನು ಈ ದಾವೆಯಲ್ಲಿ ನಾನೊಬ್ಬನೆ ದಾವಾ ಆಸ್ತಿಯ ಹಕ್ಕುದಾರರು ಎಂದು ಘೋಷಣೆ ಮಾಡಬೇಕು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಭಾಗೀರಥಿಯವರಿಗೆ 4 ಜನ ಮಕ್ಕಳಿದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೇ ಇರಲು ಕಾರಣ ಇರುವುದಿಲ್ಲ.

5. ಪ್ರತಿವಾದಿಯ ದಾವಾ ಎ ಶೆಡ್ಯೂಲ ಆಸ್ತಿಗೆ ತಾಗಿ ದಕ್ಷಿಣ ದಿಕ್ಕಿನಲ್ಲಿ ಇದೆ ಎಂದರೆ ಸರಿ. ಸದರಿ ಜಾಗದ ಸರ್ವೆ ನಂಬ್ರ 103/3-ಪಿ-2 ರಲ್ಲಿ 30 ಸೆಂಟ್ಸ. ಸದರಿ ಸ್ಥಳ ಮೊದಲು ಸಾಗುವಳಿ ಗದ್ದೆಯಾಗಿತ್ತು ಎಂದರೆ ಸರಿಯಲ್ಲ. ನನ್ನ ಮತ್ತು ಸುಬ್ರಾಯ ಶೇರಿಗಾರವರ ಜಾಗದ ಮಧ್ಯ ಇರುವ ಗಡಿ ಎಂದರೆ ಸರಿಗೆ ಬೇಲಿ. ಸರ್ವೆ ನಂಬ್ರ 103/3-ಪಿ-2 ರಲ್ಲಿ 30 ಸೆಂಟ್ಸ ಸ್ಥಳದಲ್ಲಿ 4 ದಿಕ್ಕಿನಲ್ಲಿ ಕೂಡಾ ಸರಿಗೆ ಬೇಲಿ ಇದೆ ಎಂದರೆ ಸರಿ. ಸರ್ವೆ ನಂಬ್ರ 103/3-ಪಿ-2 ರಲ್ಲಿ 30 ಸೆಂಟ್ಸ ಸ್ಥಳಕ್ಕೆ ಪ್ರತಿವಾದಿಯ ತಂದೆ ಸುಬ್ರಾಯ ಟಿ.ಆರ್.ಐ.ನಂಬ.753/76-77 ರಂತೆ ಘೋಷಾಣ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ದಿಃ 21-06-1977 ರಂದು ಅವರ ಹೆಸರಿಗೆ ತೀರ್ಪಾಗಿದೆ ಎಂದರೆ ಸರಿ. ಅವರ ಹೆಸರಿಗೆ ಪಟ್ಟೆಯಾಗಿ ಆರ್.ಟಿ.ಸಿ.

ಬದಲಾವಣೆಯಾಗಿದೆ ಎಂದರೆ ಗೊತ್ತಿಲ್ಲ. ಸುಬ್ರಾಯ ಶೇರಿಗಾರವರ ಹೆಸರಿಗೆ ತೀರ್ಪಾಗಿರುವ ಆರ್.ಟಿ.ಸಿ. ಈಗ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯ ಆಸ್ತಿಯಲ್ಲಿ ನನಗೆ ಅಧಿಕಾರ ಇರುವುದಿಲ್ಲ.

6.ನನ್ನ ಆಸ್ತಿಯನ್ನು ಪ್ರತಿವಾದಿ ಅವನ ಆಸ್ತಿ ಎಂದು ಹೇಳಿದ ಕಾರಣ ದಾವೆಯನ್ನು ದಾಖಲಿಸಿರುತ್ತೇನೆ. ಈ ದಾವೆಯನ್ನು ದಾಖಲಿಸುವ 10 ವರ್ಷ ಮೊದಲೇ ಪ್ರತಿವಾದಿ ನನ್ನ ಆಸ್ತಿಯನ್ನು ಆತನ ಆಸ್ತಿ ಎಂದು ಹೇಳಿರುತ್ತಾನೆ. ನಾನು ದಾವಾ ಆಸ್ತಿಯ ಬಗ್ಗೆ ಸುಳ್ಳು ದಾಖಲೆಗಳನ್ನು ಮಾಡಿಕೊಂಡಿರುವ ಬಗ್ಗೆ ನನಗೆ ದಾವಾ ಆಸ್ತಿಯಲ್ಲಿ ಹಕ್ಕು ಪ್ರಾಪ್ತವಾಗಿರುವುದಿಲ್ಲ ಎಂದು ಹೇಳಿರುತ್ತಾರೆ ಹಾಗು ನನ್ನ ಆಸ್ತಿಯಲ್ಲಿ ಅವನಿಗೆ ಹಕ್ಕು ಇದೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

7. ದಿಃ 07-12-2017 ರಂದು ನಮ್ಮ ಜಾಗದಲ್ಲಿ ಘಟನೆ ಆಗಿರುವುದಿಲ್ಲ. ಸದರಿ ದಿನಾಂಕದಂದು ಘಟನೆ ಆಗಿದೆ ಎಂದು ನನ್ನ ವಕೀಲರಿಗೆ ಹೇಳಿರುತ್ತೇನೆ. ಸದರಿ ದಿನಾಂಕದಂದು ಆ ಜಾಗ ನನ್ನ ಸ್ವಾ ಧೀನದಲ್ಲಿದೆ ಮತ್ತು ನಾನೇ ನಾಟಿ ಮಾಡುತ್ತಿದ್ದೇನೆ ಎಂದು ಹೇಳಿದ್ದೇನೆ. ಆ ದಿನಾಂಕಂದು ನನಗೆ ಮತ್ತು ಪ್ರತಿವಾದಿಗೆ ತಗಾದೆ ಆಗಿದೆ ಎಂದು ಹೇಳಿರುವುದಿಲ್ಲ. ಅಳತೆಗೆ ಸರ್ವೆಯರ್ ಬಂದಿದ್ದಾರೆ ಮತ್ತು ಅಳತೆಗೆ ಆಕ್ಷೇಪ ಮಾಡಿದ್ದೇನೆ ಎಂದು ಹೇಳಿರುವುದಿಲ್ಲ. ದಿಃ07-12-2017 ರಂದು ಸರ್ವೆಗೆ ಬಂದಿರುತ್ತಾರೆ ಹಾಗು ಆ ದಿನ ಘಟನೆ ನಡೆದಿದೆ ಎಂದು ಹೇಳಲು ನನ್ನ ಬಳಿ ದಾಖಲೆ ಇರುವುದಿಲ್ಲ. ನಿಪಿ 5 ರಂತೆ ತೀರ್ಪಾಗುವಾಗ ಯೋಗೀಶ್ ಹೊಳ್ಳರವರಿಗೆ ನೋಟೀಸನ್ನು ನೀಡಿರುವುದಿಲ್ಲ.

8. ನಿಪಿ 7 ನಕ್ಷೆಯನ್ನು ಯಾರು ಮಾಡಿರುತ್ತಾರೆ ಮತ್ತು ಯಾವ ಆಧಾರದಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 7 ರಲ್ಲಿ ನನ್ನ ಆಸ್ತಿಗೆ ತಾಗಿ ದಕ್ಷಿಣಕ್ಕೆ ಪ್ರತಿವಾದಿಯ ಆಸ್ತಿ ಇದೆ ಎಂದು ನಾನು ಹೇಳಿರುತ್ತೇನೆ. ನಕ್ಷೆ ಮಾಡುವಾಗ ಪ್ರತಿವಾದಿಗಾಗಲೀ, ಆತನ ತಂದೆಗಾಗಲೀ ನೋಟೀಸು ನೀಡಿರುವುದು ಗೊತ್ತಿಲ್ಲ. ದಾವಾ ಆಸ್ತಿಯ ಪಶ್ಚಿಮದಲ್ಲಿ ಸಾರ್ವಜನಿಕ ರಸ್ತೆ ಇದೆ ಎಂದರೆ ಸರಿ. ಆ ರಸ್ತೆ ದಾವಾ ಆಸ್ತಿಯ ಭಾಗದಲ್ಲಿ ಹಾದುಹೋಗುತ್ತದೆ. ರಸ್ತೆಗೆ ದಾವಾ ಆಸ್ತಿಯಲ್ಲಿ 3-4 ಸೆಂಟ್ಸ ಹೋಗಿರುತ್ತದೆ. ರಸ್ತೆಗೆ ಜಾಗ ಹೋಗಿದೆ ಎಂದು ವಕೀಲರಿಗೆ ಹೇಳಿರುವುದಿಲ್ಲ. ನಿಪಿ 7 ಸ್ಥಳದ ಸ್ಥಿತಿಗತಿಗೆ ಅನುಗುಣವಾಗಿ ಇರುವುದಿಲ್ಲ ಎಂದರೆ ಹೇಳಲು ಸಾಧ್ಯವಿಲ್ಲ. ದಾವೆ ದಾಖಲಿಸಲು ನನಗೆ ಯಾವುದೇ ಕಾರಣ ಇಲ್ಲ ಹಾಗು ಪ್ರತಿವಾದಿಗಳ ಮೇಲೆ ಸುಳ್ಳು ಆಪಾದನೆ ಮಾಡಿ ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಮತ್ತು ದಾವಾ ಪತ್ರದಲ್ಲಿ ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ

ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಆ ಆಸ್ತಿ ನನ್ನ ಹಕ್ಕಿನ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**